# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** : 23
**ಮಾನ್ಯ ಸದಸ್ಯರ ಹೆಸರು** : ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು)
**ಉತ್ತರಿಸಬೇಕಾದ ದಿನಾಂಕ** : 12-09-2022
**ಉತ್ತರಿಸುವ ಸಚಿವರು** : ಪ್ರವಾಸೋದ್ಯಮ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕೇಂದ್ರ ಸರ್ಕಾರದ "ಸ್ವದೇಶಿ ದರ್ಶನ್" ಮತ್ತು "ಪ್ರಸಾದ್" ಎಂಬ ಯೋಜನೆಗಳನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗಿದೆಯೇ;</td><td>ಅನುಷ್ಠಾನಗೊಳಿಸಿರುವುದಿಲ್ಲ.</td></tr>
<tr><td>ಆ)</td><td>ಹಾಗಿದ್ದಲ್ಲಿ, ಈ ಯೋಜನೆಯ ಪ್ರಮುಖ ಉದ್ದೇಶವೇನು; ಈ ಯೋಜನೆಗಳಡಿಯಲ್ಲಿ ಎಷ್ಟು ಕಾಮಗಾರಿಗಳನ್ನು ಕೈಗೊಳ್ಳಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ; ಎಷ್ಟು ಕಾಮಗಾರಿಗಳು ಮಂಜೂರಾಗಿವೆ; ಎಷ್ಟು ಕಾಮಗಾರಿಗಳು ಮಂಜೂರಾತಿ ಆಗಬೇಕಾಗಿವೆ; ಮಂಜೂರಾತಿ ವಿಳಂಬಕ್ಕೆ ಕಾರಣಗಳೇನು; (ಕಾಮಗಾರಿವಾರು ವಿವರವಾದ ಮಾಹಿತಿ ಒದಗಿಸುವುದು)</td><td>
ಕೇಂದ್ರ ಸರ್ಕಾರದ ಸ್ವದೇಶ್ ದರ್ಶನ್ ಹಾಗೂ ಪ್ರಸಾದ್ ಯೋಜನೆಗಳ ಪ್ರಮುಖ ಉದ್ದೇಶಗಳನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ.<br><br>
ಸ್ವದೇಶ್ ದರ್ಶನ ಯೋಜನೆ : 1.0<br>
ಕೇಂದ್ರ ಸರ್ಕಾರ ಜಾರಿಗೊಳಿಸಿರುವ "ಸ್ವದೇಶ್ ದರ್ಶನ್" ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲು ಪ್ರಸ್ತಾವನೆಗಳನ್ನು ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯಕ್ಕೆ ಕಳುಹಿಸಲಾಗಿರುತ್ತದೆ. ವಿವರಗಳು ಈ ಕೆಳಕಂಡಂತಿವೆ<br>
(Rs. In Cr)
<table>
<tr><th>Sl No.</th><th>Project name</th><th>Submission Date.</th><th>Estimated cost</th></tr>
<tr><td>1</td><td>Shanthi sagar (Heritage) Circuit</td><td>12.02.2019</td><td>55.27</td></tr>
<tr><td>2</td><td>Coastal Circuit</td><td>29.06.2019</td><td>25.10</td></tr>
<tr><td>3</td><td>Deccan Heritage Circuit</td><td>13.11.2017</td><td>145.71</td></tr>
<tr><td>4</td><td>Eco Tourism Circuit</td><td>28.01.2017</td><td>92.60</td></tr>
<tr><td>5</td><td>Jain Circuit</td><td>28.10.2016</td><td>70.43</td></tr>
</table>
ಸ್ವದೇಶ್ ದರ್ಶನ್ ಯೋಜನೆಯಡಿಯಲ್ಲಿ ಸಲ್ಲಿಸಲಾದ ಮೇಲ್ಕಂಡ 05 ಪ್ರಸ್ತಾವನೆಗಳು ಅನುಮೋದನೆಗೊಂಡಿರುವುದಿಲ್ಲ.<br><br>
ಪ್ರಸಾದ್ ಯೋಜನೆ : 1.0<br>
(Rs. In Cr)
<table>
<tr><th>Sl No.</th><th>Project name</th><th>Estimated cost</th><th>Submission Date.</th></tr>
<tr><td>1.</td><td>Chamundeshwari Temple, Mysore</td><td>47.26</td><td>16.08.2022</td></tr>
</table>
ಮೈಸೂರು ಜಿಲ್ಲೆಯ ಚಾಮುಂಡಿ ಬೆಟ್ಟದ ಸಮಗ್ರ ಅಭಿವೃದ್ಧಿ ಯೋಜನೆಯನ್ನು ಕೇಂದ್ರ ಸರ್ಕಾರದ ಪ್ರಸಾದ್ ಯೋಜನೆ 1.0 ರಡಿ ಅಭಿವೃದ್ಧಿಪಡಿಸಲು ರೂ.47.26 ಕೋಟಿಗಳಿಗೆ ವಿಸ್ತೃತ ಯೋಜನಾ ವರದಿಯನ್ನು ತಯಾರಿಸಿ ಕೇಂದ್ರ ಸರ್ಕಾರದ ಅನುಮೋದನೆಗೆ ದಿನಾಂಕ: 16.08.2022ರಂದು ಸಲ್ಲಿಸಲಾಗಿರುತ್ತದೆ. ಅನುಮೋದನೆ ನಿರೀಕ್ಷಿಸಲಾಗುತ್ತಿದೆ.
</td></tr>
</table>

...2

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>

**ಪ್ರಸಾದ್ ಯೋಜನೆ 2.0:**

ಕೇಂದ್ರ ಸರ್ಕಾರದ ಪ್ರಸಾದ್ 2.0 ಯೋಜನೆಯಡಿ ಈ ಕೆಳಕಂಡ 07 ಪ್ರವಾಸಿ ತಾಣಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಸಂಬಂಧ ಕೇಂದ್ರ ಸರ್ಕಾರಕ್ಕೆ ದಿನಾಂಕ: 08.06.2022 ರಂದು ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು ಅನುಮೋದನೆ ನಿರೀಕ್ಷಿಸಲಾಗುತ್ತಿದೆ.

<table>
<tr><th>Sl. No.</th><th>Destination</th></tr>
<tr><td>1</td><td>Sri Madhwa Vana, Kunjarugiri, Udupi District</td></tr>
<tr><td>2</td><td>Papnash Temple, Bidar District</td></tr>
<tr><td>3</td><td>Jala Sangavi Temple, Bidar District</td></tr>
<tr><td>4</td><td>Sri Renuka Yellamma Temple, Saudatti, Belagavi District</td></tr>
<tr><td>5</td><td>Sri Huligemma Devi Temple, Huligi, Koppal District</td></tr>
<tr><td>6</td><td>Jharni Narasimha Swamy Temple, Bidar District Also known as Narasimha Cave Temple.</td></tr>
<tr><td>7</td><td>Shri Kshetra Ganagapur Dattatreya Temple, Kalaburagi District</td></tr>
</table>

**ಸ್ವದೇಶ್ ದರ್ಶನ್ ಯೋಜನೆ 2.0**

ಕೇಂದ್ರ ಪುರಸ್ಕೃತ ಸ್ವದೇಶ್ ದರ್ಶನ್ 2.0 ಹೊಸ ಮಾರ್ಗಸೂಚಿಗಳನ್ನು ಸರ್ಕಾರದ ಕಾರ್ಯದರ್ಶಿಗಳು, ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯ, ನವದೆಹಲಿ ರವರ ಪತ್ರ ಸಂಖ್ಯೆ: SD-8/15/2020 SD ದಿನಾಂಕ:19.04.2022 ರಲ್ಲಿ ಹೊರಡಿಸಿದ್ದು, ಸದರಿ ಮಾರ್ಗಸೂಚಿಗಳನ್ವಯ ಸರ್ಕಾರದ ಆದೇಶ ಸಂಖ್ಯೆ: TOR 119 TDP 2022, ದಿನಾಂಕ: 28.07.2022 ರಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ರವರ ಅಧ್ಯಕ್ಷತೆಯಲ್ಲಿ State Steering Committee (SSC) ಸಮಿತಿಯನ್ನು ರಚಿಸಿ ಆದೇಶಿಸಲಾಗಿರುತ್ತದೆ. ವಿವರಗಳನ್ನು **ಅನುಬಂಧ-2**ರಲ್ಲಿ ಒದಗಿಸಿದೆ.

ಸದರಿ State Steering Committee (SSC) ಸಮಿತಿ ಸಭೆ ಕರೆದು ಒಟ್ಟು 05 ಪ್ರಸ್ತಾವನೆಗಳನ್ನು ಅನುಮೋದಿಸಿ ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯಕ್ಕೆ ಕಳುಹಿಸಿ ಕೊಡಬೇಕಾಗಿರುತ್ತದೆ.

</td></tr>
<tr><td>ಇ)</td><td>ರಾಜ್ಯಕ್ಕೆ ಕಳೆದ 7 ವರ್ಷಗಳಿಂದ ಈ ಯೋಜನೆಗಳಡಿಯಲ್ಲಿ ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ಅನುದಾನವೆಷ್ಟು; ಖರ್ಚಾಗಿರುವ ಅನುದಾನ ವೆಷ್ಟು? (ಸಂಪೂರ್ಣ ಮಾಹಿತಿ ಯನ್ನು ಒದಗಿಸುವುದು)</td><td>ಕಳೆದ 07 ವರ್ಷಗಳಲ್ಲಿ ಈ ಯೋಜನೆಗಳಡಿ ಯಾವುದೇ ಅನುದಾನವನ್ನು ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯವು ಕರ್ನಾಟಕ ರಾಜ್ಯಕ್ಕೆ ಬಿಡುಗಡೆ ಮಾಡಿರುವುದಿಲ್ಲ.</td></tr>
</table>

**TOR 240 TDV 2022**

(ಆನಂದ್ ಸಿಂಗ್)
ಪ್ರವಾಸೋದ್ಯಮ,
ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು

## ಅನುಬಂಧ-1

### I ಸ್ವದೇಶ್ ದರ್ಶನ್ ಯೋಜನೆಯ ಮುಖ್ಯ ಉದ್ದೇಶಗಳು :

1. ಇದೊಂದು ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯದ ಕೇಂದ್ರ ಪುರಸ್ಕೃತ ಥೀಮ್ ಆಧಾರಿತ ಯೋಜನೆಯಾಗಿದೆ.
2. ಆರ್ಥಿಕ ಬೆಳವಣಿಗೆ ಮತ್ತು ಉದ್ಯೋಗ ಸೃಷ್ಟಿಯ ಪ್ರಮುಖ ಉತ್ತೇಜಕವಾಗಿ ಪ್ರವಾಸೋದ್ಯಮವನ್ನು ಬೆಳೆಸುವುದು.
3. ಯೋಜಿತ ಮತ್ತು ಆದ್ಯತೆಯ ರೀತಿಯಲ್ಲಿ ಪ್ರವಾಸಿ ಸಾಮರ್ಥ್ಯವನ್ನು ಹೊಂದಿರುವ ಸರ್ಕ್ಯೂಟ್‌ಗಳನ್ನು ಅಭಿವೃದ್ಧಿಪಡಿಸುವುದು.
4. ದೇಶದಲ್ಲಿ ಜೀವನೋಪಾಯವನ್ನು ಸೃಷ್ಟಿಸಲು ದೇಶದ ಸಾಂಸ್ಕೃತಿಕ ಮತ್ತು ಪರಂಪರೆಯ ಮೌಲ್ಯವನ್ನು ಉತ್ತೇಜಿಸುವುದು ಹಾಗೂ ಪ್ರಸರಣಗೊಳಿಸುವುದು.
5. ಅಭಿವೃದ್ಧಿಶೀಲ ಪ್ರಪಂಚದಿಂದ ಸುಸ್ಥಿರ ರೀತಿಯಲ್ಲಿ ಪ್ರವಾಸಿ ಆಕರ್ಷಣೆಯನ್ನು ಹೆಚ್ಚಿಸುವುದು ಸರ್ಕ್ಯೂಟ್/ಗಮ್ಯಸ್ಥಾನಗಳಲ್ಲಿ ವರ್ಗ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸುವುದು.
6. ಸಮುದಾಯ ಆಧಾರಿತ ಅಭಿವೃದ್ಧಿ ಮತ್ತು ಬಡವರ ಪರವಾದ ಪ್ರವಾಸೋದ್ಯಮ ವಿಧಾನವನ್ನು ಅನುಸರಿಸುವುದು.
7. ಸ್ಥಳೀಯರಲ್ಲಿ ಜಾಗೃತಿ ಮೂಡಿಸುವುದು

### II ಪ್ರಸಾದ್ ಯೋಜನೆಯ ಮುಖ್ಯ ಉದ್ದೇಶಗಳು:-

1. ಇದೊಂದು ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯದ ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಹಾಲಿ ಇರುವ ಪ್ರಮುಖ ಯಾತ್ರಾ ಸ್ಥಳಗಳನ್ನು ಉನ್ನತೀಕರಿಸುವ ಹಾಗೂ ಹೆಚ್ಚು ಪ್ರವಾಸಿ ಸೌಕರ್ಯಗಳನ್ನು ರೂಪಿಸುವ ಯೋಜನೆಯಾಗಿದೆ.
2. ಧಾರ್ಮಿಕ ಯಾತ್ರಾ ಸ್ಥಳಗಳ ಪ್ರವಾಸವನ್ನು ಯೋಜನಾ ಬದ್ಧವಾಗಿ ಸಂಯೋಜಿಸಿ ಸುಸ್ಥಿರವಾಗಿ ಅಭಿವೃದ್ಧಿಗೊಳಿಸುವುದು.
3. ಧಾರ್ಮಿಕ ಯಾತ್ರಾ ಪ್ರವಾಸೋದ್ಯವನ್ನು ನೇರವಾಗಿ ಹಾಗೂ ವಿವಿಧ ಉದ್ದೇಶಗಳ ಪರಿಣಾಮದಿಂದ ಉದ್ಯೋಗ ಸೃಷ್ಟಿಸುವುದು.
4. ಧಾರ್ಮಿಕ ಯಾತ್ರಾ ಸ್ಥಳಗಳ ಅಭಿವೃದ್ಧಿಯನ್ನು ಎಲ್ಲಾ ವರ್ಗಗಳಿಗೂ ಹಾಗೂ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸುವುದು.
5. ಪ್ರವಾಸಿಗರನ್ನು ಆಕರ್ಷಿಸಲು ಅತ್ಯುನ್ನತ ವಿಶ್ವದರ್ಜೆಯ ವಿವಿಧ ಮೂಲ ಸೌಲಭ್ಯಗಳನ್ನು ನಿರ್ಮಿಸಿ ಸುಸ್ಥಿರವಾಗಿ ಅಭಿವೃದ್ಧಿಪಡಿಸುವುದು.
6. ಸ್ಥಳೀಯ ಸಮೂಹಗಳಿಗೆ ಪ್ರವಾಸೋದ್ಯಮದ ಬಗ್ಗೆ ಅರಿವು ಮೂಡಿಸುವುದು ಹಾಗೂ ಅದರಿಂದ ಅವರಿಗೆ ಆದಾಯ ಮೂಲಗಳನ್ನು ಗಳಿಸುವುದು ಮತ್ತು ಇದರಿಂದ ಅವರ ಜೀವನ ಮಟ್ಟವನ್ನು ಸುಧಾರಿಸುವುದು ಇದರಿಂದಾಗಿ ಸ್ಥಳೀಯ ಪ್ರದೇಶಗಳನ್ನು ಅಭಿವೃದ್ಧಿಗೊಳಿಸುವುದು.
7. ಪ್ರಮುಖ ಪ್ರವಾಸಿ ಸ್ಥಳಗಳನ್ನು ಸ್ಥಳೀಯ ಕಲೆ, ಸಂಸ್ಕೃತಿಗೆ ಕರಕುಶಲ ವಸ್ತುಗಳು ಹಾಗೂ ಆಹಾರ ಮತ್ತು ಜೀವನಾಧಾರಗಳನ್ನು ಗುರುತಿಸಿ ಪ್ರಚಾರ ಪಡಿಸುವುದು.

* * *

# ಅನುಬಂಧ-2

**ಸರ್ಕಾರದ ಆದೇಶ ಸಂಖ್ಯೆ: TOR 119 TDP 2022 , ದಿನಾಂಕ: 28.07.2022 ರನ್ವಯ ಕೇಂದ್ರ ಪುರಸ್ಕೃತ ಸ್ವದೇಶ್ ದರ್ಶನ್ 2.0 ಮಾರ್ಗಸೂಚಿಗಳ ಪ್ರಕಾರ ಈ ಕೆಳಕಂಡಂತೆ State Steering Committee (SSC) ಸಮಿತಿಯನ್ನು ರಚಿಸಿ ಆದೇಶಿಸಲಾಗಿದೆ.**

| | | |
|---|---|---|
| 1. | Additional Chief Secretary to Government of Karnataka | Chairperson |
| 2. | Additional Chief Secretary/Principal Secretary/Secretary to Government, Tourism Government of Karnataka. | Member |
| 3. | Additional Chief Secretary/Principal Secretary/Secretary to Government, Rural Development and Panchayat Raj Department, Government of Karnataka | Member |
| 4. | Additional Chief Secretary/ Principal Secretary/Secretary to Government, Public Works Department, Government of Karnataka. | Member |
| 5. | District In-Charge Secretary, Bengaluru Urban District. | Member |
| 6. | Regional Director (South), Ministry of Tourism. | Member |
| 7. | Two Representatives of Karnataka Tourism Industry. | Member |
| 8. | Director, Department of Tourism, Government of Karnataka. | Member Secretary |
| 9. | Deputy Director, Department of Tourism, Government of Karnataka. | Nodal officer. |

* * *